# ಸಸ್ಪೆನ್ಸ್ ಥ್ರಿಲ್ಲರ್ ಕಥೆಯಲ್ಲಿ ರಾಘವೇಂದ್ರ ರಾಜ್‌ಕುಮಾರ್

ಸಸ್ಪೆನ್ಸ್–ಥ್ರಿಲ್ಲರ್ ಕಥಾಹಂದರದ 'ಕಣ್ಣಾಮುಚ್ಚೆ ಕಾಡೇಗೂಡೇ...' ಸಿನಿಮಾ ತೆರೆಗೆ ಬರಲು ಸಿದ್ಧವಾಗಿದ್ದು, ಈ ಸಿನಿಮಾದಲ್ಲಿ ನಟ ರಾಘವೇಂದ್ರ ರಾಜ್‌ಕುಮಾರ್ ನಿವೃತ್ತ ವೈದ್ಯನ ಪಾತ್ರಕ್ಕೆ ಬಣ್ಣ ಹಚ್ಚಿದ್ದಾರೆ. ಈ ಮೂಲಕ ಬಹು ದಿನಗಳ ನಂತರ ಸಿನಿಮಾದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

ಚಿತ್ರದ ಹಾಡುಗಳನ್ನೇ ಶೀರ್ಷಿಕೆಯಾಗಿಸಿಕೊಂಡ ಸಾಕಷ್ಟು ಚಿತ್ರಗಳು ಬಂದಿವೆ. ಇದೇ ಸಾಲಿಗೆ 'ಕಣ್ಣಾಮುಚ್ಚೆ ಕಾಡೇ ಗೂಡೇ' ಹೊಸ ಸೇರ್ಪಡೆ. ರಾಘವೇಂದ್ರ ರಾಜ್‌ಕುಮಾರ್ ಪ್ರಮುಖ ಪಾತ್ರದಲ್ಲಿರುವ ಈ ಚಿತ್ರ ಜನವರಿ 17ಕ್ಕೆ ತೆರೆಗೆ ಬರಲಿದೆ.

'ಒಂದು ಕೊಲೆಯ ಸುತ್ತ ಸಿನಿಮಾ ಸಾಗಲಿದ್ದು, ಅದನ್ನು ಕಂಡುಹಿಡಿಯಲು ಖಾಸಗಿ, ಸರ್ಕಾರಿ ಪಡೆ ಮುಂದೆ ಬರುತ್ತದೆ. ಇದರ ಮಧ್ಯೆ ಹುಡುಗಿಯೊಬ್ಬಳು ಸಮಸ್ಯೆಯಲ್ಲಿ ಸಿಲುಕಿಕೊಳ್ಳುತ್ತಾಳೆ. ಅಂತಿಮವಾಗಿ ಅಪರಾಧಿ ಸಿಗುತ್ತಾನಾ? ಆಕೆಯು ಕಷ್ಟದಿಂದ ಹೊರ ಬರುತ್ತಾಳಾ? ಎಂಬುದನ್ನು ಸಸ್ಪೆನ್ಸ್ ರೀತಿಯಲ್ಲಿ ತೋರಿರುವುದಾಗಿ ಚಿತ್ರತಂಡ ಹೇಳಿಕೊಂಡಿದೆ.

ಡಾರ್ಲಿಂಗ್ ಪ್ರೊಡಕ್ಷನ್ಸ್ ಅಡಿಯಲ್ಲಿ ಅನಿತಾ ವೀರೇಶ್‌ಕುಮಾರ್ ನಿರ್ಮಾಣ ಮಾಡಿದ್ದು, ನಟರಾಜ್ ಕೃಷ್ಣೇಗೌಡ ಚಿತ್ರಕ್ಕೆ ಕಥೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದಾರೆ. ಅಥರ್ವ ಪ್ರಕಾಶ್ ನಾಯಕ. ತುಳು ಚಿತ್ರದಲ್ಲಿ ನಟಿಸಿದ್ದ ಪ್ರಾರ್ಥನಾ ನಾಯಕಿಯಾಗಿದ್ದಾರೆ.





# ತಪಸ್ವಿನಿ ಹೊಸ ಪ್ರಯೋಗ

'ಹರಿಕಥೆ ಅಲ್ಲ ಗಿರಿಕಥೆ' ಸಿನಿಮಾ ಮೂಲಕ ಕನ್ನಡ ಸಿನಿಮಾರಂಗಕ್ಕೆ ಕಾಲಿಟ್ಟ ನಟಿ ತಪಸ್ವಿನಿ ಪೂಣಚ್ಚ ಸದ್ಯ ಕನ್ನಡದ ಎರಡು ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ. ನೋಡುಗರೊಂದಿಗೆ ಒಂದಾಗುತ್ತಾ ಸಾಗುವ ಪಾತ್ರಗಳೊಂದಿಗೆ ಸಿನಿಮಾರಂಗದಲ್ಲಿ ತಮ್ಮ ಗ್ರಾಫ್ ಬೆಳವಣಿಗೆ ಕಾಣಬೇಕಾದ ನಿರೀಕ್ಷೆಯನ್ನು ವ್ಯಕ್ತಪಡಿಸುತ್ತಲೇ, ತಮ್ಮ ಮತ್ತೊಂದು ಯೋಜನೆ ಬಗ್ಗೆಯೂ ಮಾತನಾಡಿದ್ದಾರೆ.

'ಒಂದಾದ ಮೇಲೆ ಒಂದರಂತೆ ಸಿನಿಮಾ ಪ್ರಾಜೆಕ್ಟ್‌ಗಳು ಸಿಗಬೇಕು, ನನ್ನದು ಪ್ಯಾಕ್ಡ್ ಶೆಡ್ಯೂಲ್ ಆಗಬೇಕು ಎಂದು ನಾನು ಬಯಸುವುದಿಲ್ಲ. ಸಿನಿಮಾ ಪ್ರಾಜೆಕ್ಟ್‌ಗಳ ಬಗ್ಗೆ ಯಾವುದೇ ಆತುರವಿಲ್ಲ' ಎಂದಿದ್ದಾರೆ.

'ನನ್ನ ದಾರಿಗೆ ಬಂದ ಪಾತ್ರವೆಲ್ಲವನ್ನೂ ನಾನು ಒಪ್ಪಿಕೊಳ್ಳುವುದಿಲ್ಲ. ಪಾತ್ರ ಒಂದು ಆಲೋಚನೆ, ಸ್ಪಷ್ಟ ಉದ್ದೇಶವನ್ನು ಹೊಂದಿರಬೇಕು. ಆ ಪಾತ್ರಕ್ಕೆ ನಾನು ಹೇಗೆ ಫಿಟ್ ಆಗುತ್ತೇನೆ ಎಂಬುದನ್ನೂ ನೋಡುತ್ತೇನೆ. ಆ ಪ್ರಾಜೆಕ್ಟ್ ನನಗೆ ತೃಪ್ತಿಕರವಾಗಿಲ್ಲ ಎಂದರೆ, ಎರಡನೇ ಬಾರಿ ಯೋಚಿಸದೆ ಇಲ್ಲ ಎನ್ನುತ್ತೇನೆ. ಹಣದ ವಿಷಯಕ್ಕಿಂತ ನನ್ನ ಮನಸ್ಸನ್ನು ತೃಪ್ತಿಪಡಿಸುವಂಥ ಪಾತ್ರಗಳನ್ನು ಬಯಸುತ್ತೇನೆ' ಎಂದು ತಮ್ಮ ಅಪೇಕ್ಷೆಯನ್ನು ಮುಂದಿಟ್ಟಿದ್ದಾರೆ.

ಇದರೊಂದಿಗೆ, ತಮ್ಮ ಮತ್ತೊಂದು ಯೋಜನೆ ಬಗ್ಗೆಯೂ ಮಾತನಾಡಿದ್ದಾರೆ.

'ನನ್ನ ಸಿನಿಮಾ ಶೂಟಿಂಗ್ ಮುಗಿಯುತ್ತಿದ್ದಂತೆ, ಯೂರೋಪ್‌ಗೆ ಹೋಗಬೇಕೆಂದುಕೊಂಡಿದ್ದೇನೆ. ಅಲ್ಲಿ ಕಾಫಿ ಬಗ್ಗೆ ಜ್ಞಾನ ಸಂಪಾದಿಸಬೇಕೆಂಬುದು ನನ್ನ ಆಸೆ. ಇಲ್ಲಿ ಹಲವರಿಗೆ ಕಾಫಿಯ ಆರೋಗ್ಯಕರ ಲಾಭಗಳ ಕುರಿತು ಹೆಚ್ಚು ತಿಳಿದಿಲ್ಲ. ನಾನು ಈಗಾಗಲೇ ಕಾಫಿ ಸರ್ಟಿಫಿಕೇಷನ್ ಪಡೆದುಕೊಂಡಿದ್ದೇನೆ. ಕಾಫಿ ಕುರಿತ ನನ್ನ ಹೊಸ ಕಲಿಕಾ ಕೌಶಲಗಳಿಂದ ಕಾಫಿ ಉದ್ಯಮವನ್ನು ಇನ್ನಷ್ಟು ವೃದ್ಧಿಗೊಳಿಸಬಹುದು' ಎಂದು ಹೇಳಿದ್ದಾರೆ.

ಸಿನಿಮಾರಂಗದಲ್ಲಿ ಏರಿಳಿತಗಳು ಸಾಮಾನ್ಯವಾದ್ದರಿಂದ ಇನ್ನೊಂದು ಆದಾಯ ದಾರಿ ಅವಶ್ಯಕ ಎನ್ನುವ ತಪಸ್ವಿನಿ ಅವರಿಗೆ ಕೊಡಗಿನಲ್ಲಿ ಕಾಫಿ ಎಸ್ಟೇಟ್ ಇದೆ. ಹೀಗಾಗಿ ಕಾಫಿ ಬಗ್ಗೆ ಹೆಚ್ಚು ತಿಳಿದುಕೊಂಡಷ್ಟು ಒಳ್ಳೆಯದೇ ಎನ್ನುವುದು ಅವರ ಅಭಿಪ್ರಾಯ.